# ಕೆ.ವಿ. ತಿರುಮಲೇಶ್ ಕವಿತೆಗಳು

## ಇಳಿವಯಸ್ಸಿನಲ್ಲಿ ಎಲ್ಲರೂ

ಇಳಿವಯಸ್ಸಿನಲ್ಲಿ ಎಲ್ಲರೂ ಏಕಾಂಗಿ ರಾಜಾ
ನಮ್ಮ ಕಿಂಗ್ ಲೀಯರ್ ಕೂಡ
ಅವನಂಥ ರಾಜ
ಇನ್ನೊಬ್ಬನಿರಲಿಲ್ಲ
ಈಗ ನಾನೇ ರಾಜ
ಬೆಟ್ಟ ಕಾಡುಗಳ ಒಂಟಿತನ
ಅಂತರ್ಗತಗೊಳಿಸಿ ಹಗಲು
ರಾತ್ರಿಗಳಾಗಿ
ಹೂವು ಮುಳ್ಳುಗಳು ಒಂದಾಗಿ
ತರ್ಕದ ಸುಳಿಯಿಂದ ತಪ್ಪಿಸಿಕೊಂಡು



ಮಾತಿಗೆಂದೇ ಮಾತು ಹಲವು ಸಲ ಮೌನ
ನಕ್ಕಂತೆಯೇ ಬಿಕ್ಕಳಿಸಿ ಯಾವುದು
ನಗು ಯಾವುದು
ಬಿಕ್ಕಳಿಕೆ ಎನಿಸಿ

ಮೇಲೆ
ತಾರಾಗಣ ಕೆಳಗೆ ಮುಳ್ಳಿನ ಹಾದಿ
ಕಾರ್ಯಕಾರಣ ಸಂಬಂಧ ಅಳಿಸಿ
ಏನು ಸಂಬಂಧ ಎನಿಸಿ

ಆಹ ಆಗಲೇ ಕವಿಯಿತು ತಮಂಧ
ಬಿರುಗಾಳಿ ಬೀಸಿ ಮಳೆಮೋಡಗಳ ಸದ್ದು
ಎದ್ದು ಬರುವುದು ಅನತಿ
ದೂರದಿಂದ ಎಷ್ಟು ದೂರದಿಂದ ಎನಿಸಿ

ಏನಿದು ಕಿರೀಟ ಎಲೆ ಹೂವುಗಳ ಕಿರೀಟ
ಕಿರೀಟವೇ
ಇದು ರಾಜಮಕುಟ
ಆ ಅಂಥ ಭ್ರಮೆ ಕೂಡ ಎಷ್ಟು ಛಂದ
ಎನಿಸಿ
ಸಾವು ಸಹ ಹಿಂಜರಿದಿತ್ತು ಅವನ ಕಂಡು
ಕರಡಿಯೊಂದು ಪಕ್ಕಕ್ಕೆ ಸರಿಯಿತು
ತಲೆಯ ಮೂಸಿ

ಮಿಂಚು ಮಿಂಚಿಗು ನಿನ್ನ ಮುಖ
ಹೇಗೆ ಹೊಳೆಯುತಿದೆ
ಮಗಳೆ
ಒಂದೊಂದು ಸಲವು ನೋಡುವೆನು ನಾನು
ಮೊದಲ ಸಲ ನೋಡಿದಂತೆ!